# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 554 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 09.03.2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆಯಲ್ಲಿ "ಡೇನಲ್ಮ್" ಯೋಜನೆಯಡಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: ಈ ಯೋಜನೆಯನ್ನು ರಾಜ್ಯದಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ; | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ-ಡೇ-ನಲ್ಮ್ ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ. |

| ಕ್ರ. ಸಂ | ಜಿಲ್ಲೆ ಹೆಸರು | ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|
| 1 | ಕಲಬುರಗಿ | 04 |
| 2 | ಯಾದಗಿರಿ | 03 |

ರಾಜ್ಯದಲ್ಲಿ "ಡೇನಲ್ಮ್" ಯೋಜನೆಯನ್ನು ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರ OM No.k-14011/2/2012-UPA/FTS-5196, ದಿನಾಂಕ: 19.02.2016 ರನ್ವಯ ಜಾರಿಗೆ ತರಲಾಗಿದೆ.

ಸದರಿ ಡೇ-ನಲ್ಮ್ ಅಭಿಯಾನವನ್ನು ದಿ:30.09.2024 ರ ಅಂತ್ಯಕ್ಕೆ ಮುಕ್ತಾಯಗೊಳಿಸಲಾಗಿರುತ್ತದೆ.

ಮುಂದುವರೆದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರ ಪತ್ರ ಸಂಖ್ಯೆ:K-11013(8)/1/2021-UPA-I-UD-Part(1)/E-9126071 ದಿನಾಂಕ:04.12.2024ರನ್ವಯ ಹೊಸ ಯೋಜನೆಯಾದ ದೀನ್ ದಯಾಳ್ ಜನ ಆಜೀವಿಕ (ಶಹರಿ) ಯೋಜನೆಯನ್ನು (DJAY-S) ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿ ಆದೇಶಿಸಿರುತ್ತಾರೆ. ಸದರಿ ಯೋಜನೆಯನ್ನು ದಿನಾಂಕ:30.09.2025 ರವರೆಗೆ ಮುಂದುವರೆಸಲಾಗಿರುತ್ತದೆ.

| | | |
|---|---|---|
| (ಆ) | ಸದರಿ ಸಿಬ್ಬಂದಿಗಳ ಕೆಲಸ ಕಾರ್ಯಗಳೇನು; ಇವರಿಗೆ ನೀಡುತ್ತಿರುವ ವೇತನ/ಗೌರವಧನ ಎಷ್ಟು ಹಾಗೂ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನೀಡಲಾಗುತ್ತಿದೆ; ಇವರನ್ನು ಎಂದಿನಿಂದ ನೇಮಕ ಮಾಡಿಕೊಳ್ಳಲಾಗಿದೆ; (ಮಾಹಿತಿ ನೀಡುವುದು) | • ಸದರಿ ಸಿಬ್ಬಂದಿಗಳು ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಕರ್ತವ್ಯ ನಿರ್ವಹಣೆ, ಅಮೃತ್ ಮಿತ್ರ ಕಾರ್ಯಕ್ರಮದ ಅನುಷ್ಠಾನ, ನಗರದ ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಿ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರ ವಿತರಣೆ, ಪಿಎಂ ಸ್ವ-ನಿಧಿ ಯೋಜನೆಯಡಿ ಕಿರು ಸಾಲ ಸೌಲಭ್ಯ ಕಲ್ಪಿಸುವ ಸಂಯೋಜನೆ ಕಾರ್ಯನಿರ್ವಹಿಸುವುದು.<br>• ಪ್ರತಿ ಮಾಹೆ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ Community Mission Manager (CMM) ರವರಿಗೆ ರೂ.60,000/- ಮತ್ತು Multi Talking officials (MTO) ರವರಿಗೆ ರೂ.30,000/- ವೇತನವನ್ನು ಪಾವತಿಸಲಾಗುತ್ತಿದೆ.<br>• ಡೇ-ನಲ್ಮ್ ಲೆಕ್ಕ ಶೀರ್ಷಿಕೆ ಸಂಖ್ಯೆ: 3604-00-191-5-52-059 ಹಾಗೂ DJAY-S ಲೆಕ್ಕ ಶೀರ್ಷಿಕೆ 2230-02-101-0-20-051 ರಡಿ ವೇತನ ನೀಡಲಾಗುತ್ತಿದೆ.<br>• ಸದರಿ ಸಿಬ್ಬಂದಿಗಳು 2018 ರಿಂದ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| (ಇ) | "ಡೇನಲ್ಮ್" ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಳೆದ 7 ತಿಂಗಳಿಗಳಿಂದ ವೇತನ/ಗೌರವಧನ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಿಬ್ಬಂದಿಗಳ ಸಂಬಳವನ್ನು ನೀಡದಿರಲು ಕಾರಣವೇನು ಮತ್ತು ಯಾವಾಗ ನೀಡಲಾಗುವುದು; | ಹೌದು.<br>ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರ ಪತ್ರ ಸಂಖ್ಯೆ:K-11013(8)/1/2021-UPA-I-UD-Part(1)/E-9126071 ದಿನಾಂಕ:04.12.2024ರನ್ವಯ ಹೊಸ ಯೋಜನೆಯಾದ ದೀನ್ ದಯಾಳ್ ಜನ ಆಜೀವಿಕ (ಶಹರಿ) ಯೋಜನೆಯನ್ನು (DJAY-S) ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿ ಆದೇಶಿಸಿರುತ್ತಾರೆ. ಸದರಿ ಯೋಜನೆಯನ್ನು ದಿನಾಂಕ:30.09.2025 ರವರೆಗೆ ಮುಂದುವರೆಸಲಾಗಿರುತ್ತದೆ. ಅದರಂತೆ ಕರಡು ಮಾರ್ಗಸೂಚಿಯು ಮಾತ್ರ ಸ್ವೀಕೃತವಾಗಿದ್ದು, ಅನುದಾನವು ಸ್ವೀಕೃತವಾಗಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಅನುದಾನ ನಿರೀಕ್ಷಿಸಲಾಗಿದೆ.<br>ಅನುದಾನದ ಕೊರತೆ ಇರುವುದರಿಂದ ಸಿಬ್ಬಂದಿಗಳ ವೇತನಕ್ಕಾಗಿ ರೂ.10.00 ಕೋಟಿ ಅನುದಾನವನ್ನು ರಾಜ್ಯ ಸರ್ಕಾರದಿಂದ ಮರು ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಮೊತ್ತದಲ್ಲಿ ಜೂನ್-2025ರವರೆಗೆ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ / ಗೌರವಧನವನ್ನು ಪಾವತಿಸಲಾಗಿರುತ್ತದೆ.<br>ಮುಂದುವರೆದು, ದೀನದಯಾಳ್ ಜನ್ ಆಜೀವಿಕ ಯೋಜನೆ (ಶಹರಿ)ಯಡಿ ಜಿ.ಬಿ.ಎ. ವ್ಯಾಪ್ತಿಯಲ್ಲಿ Pilot |

| | | |
|---|---|---|
| | | Project ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಸ್ವೀಕೃತಗೊಂಡು ಈಗಾಗಲೇ ಬಿಡುಗಡೆ ಮಾಡಲಾಗಿರುವ ರೂ.458.00 ಲಕ್ಷಗಳ ಮೊತ್ತವನ್ನು ಡಿಜೆಎವೈ-ಎಸ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ ಪಾವತಿಗೆ ಬಳಸಿಕೊಳ್ಳಲು ಸಹಮತಿ ನೀಡಿ ಆದೇಶಿಸಲಾಗಿದ್ದು, ಸದರಿ ಮೊತ್ತದಲ್ಲಿ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಈ) | ಈ ಮೇಲ್ಕಂಡ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಜಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕನಿಷ್ಠ ವೇತನ ಕಾಯ್ದೆಯಲ್ಲಿ ನಿಗದಿ ಪಡಿಸಿರುವುದಕ್ಕಿಂತಲೂ ಹೆಚ್ಚಿನ ವೇತನವನ್ನು ತಾತ್ಕಾಲಿಕವಾಗಿ (ಗುತ್ತಿಗೆ) ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 2 ಕೌಗುಪ್ರ 2026

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.